ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲರ ಜೀವನ ಮತ್ತು ಸಾಧನೆ

(ಪಿಎಚ್.ಡಿ. ಖಾಯಂ ನೋಂದಣಿಗಾಗಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಸಾರಲೇಖ)

ಸಂಶೋಧನಾ ವಿದ್ಯಾರ್ಥಿ

ಪದ್ಮಾವತಿ ಯತಗಲ್

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಮಾರ್ಗದರ್ಶಕರು

ಪ್ರೊ. ಎಂ. ನಾಗರಾಜ

ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ತೊರವಿ–೫೮೬ ೧೦೮

2024-25

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜೀವನ ಮತ್ತು ಸಾಧನೆ

ಪರಿವಿಡಿ

ಪ್ರಸ್ತಾವನೆ

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸಮೀಕ್ಷೆ, ಸ್ವರೂಪ

ಅಧ್ಯಾಯ ಒಂದು: ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜೀವನ ಮತ್ತು ಸಾಧನೆಗಳು

೧.೧ಬಾಲ್ಯ ಜೀವನ

೧.೨ ಶಿಕ್ಷಣ

೧.೩ ಕೌಟುಂಬಿಕ ಜೀವನ

೧.೪ ಉಪನ್ಯಾಸಕ–ಪ್ರಾಚಾರ್ಯರು

೧.೫ ನ್ಯಾಯವಾದಿಗಳು

೧.೬ ಹೈಕೋರ್ಟ್ ಮುಖ್ಯ ನ್ಯಾಯಾಧೀಶರು

೧.೭ ಸುಪ್ರೀಂಕೋರ್ಟ್ ನ್ಯಾಯಾಧೀಶರು

೧.೮ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರು–ಹಂಗಾಮಿ ಅಧ್ಯಕ್ಷರು

೧.೯ ಲೋಕಾಯುಕ್ತರು

೧.೧೦ ಕರ್ನಾಟಕ ಸರ್ಕಾರದ ಗಡಿ ಮತ್ತು ನದಿಗಳ ರಕ್ಷಣಾ ಆಯೋಗ–ಅಧ್ಯಕ್ಷರು

೧.೧೧ ಗೌರವ–ಪ್ರಶಸ್ತಿ–ಸನ್ಮಾನಗಳು

ಅಧ್ಯಾಯ ಎರಡು: ಕನ್ನಡ ಸಾಹಿತ್ಯಕ್ಕೆ ಶಿವರಾಜ ವಿ. ಪಾಟೀಲರ ಕೊಡುಗೆಗಳು

೨.೧ ಕೃತಿಗಳು

೨.೨ ಲೇಖನಗಳು

೨.೩ ಉಪನ್ಯಾಸಗಳು ಮತ್ತು ಭಾಷಣಗಳು

೨.೪ ಕನ್ನಡ ಸಾಹಿತ್ಯ ಚಟುವಟಿಕೆಗಳು

೨.೫ ಇತರೆ

ಅಧ್ಯಾಯ ಮೂರು: ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಪ್ರಮುಖ ಸಂಸ್ಥೆಗಳಲ್ಲಿಯ ಸೇವೆ

೩.೧ಹಿಂದಿ ಪ್ರಚಾರ ಸಭಾ

೩.೨ ವಿಜ್ಞಾನೇಶ್ವರ ಅಧ್ಯಯನ ಪೀಠ

೩.೩ ಜೆ.ಎಸ್.ಎಸ್. ಮಹಾವಿದ್ಯಾ ಪೀಠ

೩.೪ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ

೩.೫ ಎಸ್.ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್

೩.೬ ಜನಜಾಗೃತಿ ಕಾರ್ಯಗಳು

೩.೭ ಇತರೆ ಸಂಸ್ಥೆಗಳಲ್ಲಿಯ ಸೇವೆ

ಅಧ್ಯಾಯ ನಾಲ್ಕು: ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ರವರ ಸಮಾಜಮುಖಿ ಕಾರ್ಯಗಳು

೪.೧ಬಾಲ್ಯವಿವಾಹ ವರದಿ

೪.೨ ೨ಜಿ ಸ್ಪೆಕ್ಟ್ರಂ ಹಗರಣ

೪.೩ ಮಧ್ಯಸ್ಥಿಕೆ : ವ್ಯಜ್ಯಗಳ ತೀರ್ಮಾನದ ಪರ್ಯಾಯ ವ್ಯವಸ್ಥೆ

೪.೪ ನ್ಯಾಯಮೂರ್ತಿ ಶಿವರಾಜ ಪಾಟೀಲ ಹೆಸರಿನ ಪ್ರತಿಷ್ಠಾನಗಳು

೪.೫ಕನ್ನಡಪರ ಕಾರ್ಯಗಳು

೪.೬ ಇತರೆ

ಅಧ್ಯಾಯ ಐದು: ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರ ನ್ಯಾಯಾಂಗ ಸುಧಾರಣೆಗಳು

೫.೧ ಪ್ರಮುಖ ತೀರ್ಪುಗಳು

೫.೨ ನ್ಯಾಯಾಂಗೀಯ ಆಡಳಿತಾತ್ಮಕ ಸುಧಾರಣೆಗಳು

೫.೩ ಇತರೆ

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಯನದ ಹೊಸ ಸಾಧ್ಯತೆಗಳು

ಅನುಬಂಧಗಳು

- ನಕಾಶೆ
- ವಂಶಾವಳಿ
- ಪ್ರಶಸ್ತಿಗಳು
- ವಕ್ತೃಗಳ ವಿವರ
- ಪರಾಮರ್ಶನ ಗ್ರಂಥಗಳು
- ಛಾಯಾಚಿತ್ರಗಳು

ಪ್ರಸ್ತಾವನೆ

ಸಾಹಿತ್ಯ ಎಷ್ಟು ಪ್ರಮುಖವೋ ಸಾಹಿತಿಗಳ ಬದುಕು ಕೂಡ ಅಷ್ಟೇ ಮಹತ್ವದ್ದು. ಅವರು ಬೆಳೆದ ಪರಿಸರ ಅಲ್ಲಿ ಕಂಡುಂಡ ಅನುಭವ ಸಾಹಿತ್ಯ ಸೃಷ್ಟಿಗೆ ಮತ್ತು ಅವರ ಬೆಳವಣಿಗೆಗೆ ನೇರ ಕಾರಣವಾಗಬಲ್ಲದು. ಸಾಹಿತಿಗಳ ಬದುಕನ್ನು ಅರಿಯುವ ಕುತೂಹಲ ಹಾಗೂ ಅವರ ಅಭಿರುಚಿ ಅಭಿಲಾಷೆಗಳು ಒಂದೆಡೆ ಸಿಗದೆ ಇರುವುದರಿಂದ ಆ ಕೊರತೆಯನ್ನು ನಿವಾರಿಸುವ ಸಲುವಾಗಿ ಹಲವು ಸಂಶೋಧಕರು ಪ್ರಸಿದ್ಧ ಸಾಹಿತಿಗಳ ಬದುಕು ಮತ್ತು ಬರಹದ ಬಗ್ಗೆ ಮಹಾಪ್ರಬಂಧಗಳನ್ನು ರಚಿಸಿದ್ದಾರೆ. ಅದೇ ರೀತಿ ನಾನು ಈ ರಾಷ್ಟ್ರಕಂಡ ಅದಮ್ಯಶಕ್ತಿ ಸುಪ್ರೀಂಕೋರ್ಟಿನ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜೀವನ ಮತ್ತು ಸಾಧನೆಯನ್ನು ಪ್ರಮುಖ ವಿಷಯವನ್ನಾಗಿ ಇಟ್ಟುಕೊಂಡು ಸಂಶೋಧನೆಗೆ ತೊಡಗಿದ್ದೇನೆ. ಶಿಕ್ಷಣ, ಸಾಹಿತ್ಯ, ಸಮಾಜ ಸೇವೆ, ಕಾನೂನು ಇತ್ಯಾದಿ ರಂಗಗಳಲ್ಲಿ ಪ್ರಮುಖ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆ ಮೂಲಕ ನಾಡು-ನುಡಿಗಳಿಗೆ ಸೇವೆ ಸಲ್ಲಿಸಿದ ಮಹತ್ವದ ವ್ಯಕ್ತಿಗಳಲ್ಲಿ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರು ಅಗ್ರಗಣ್ಯರಾಗಿದ್ದಾರೆ. ತಮ್ಮ ೮೮ ವರ್ಷಗಳ ಅರ್ಥಪೂರ್ಣ ಬದುಕನ್ನು ಸಮಾಜದ ಸುಖಕ್ಕಾಗಿ ಏಳಿಗೆಗಾಗಿ ಅರ್ಪಿಸಿಕೊಂಡ ಇವರ ಜೀವನದ ಯಶೋಗಾಥೆಯು ರೋಮಾಂಚನಕಾರಿಯಾಗಿದೆ.

ಅಧ್ಯಯನದ ಉದ್ದೇಶ

ಮಾನವ ಜನ್ಮದ ಆದರ್ಶಗಳಿಂದ ಕೂಡಿದ ನಾಡೋಜ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರ ಜೀವನ ಮತ್ತು ಸಾಧನೆಗಳು ಇಂದಿನ ಸಮಾಜಕ್ಕೆ ಮಾರ್ಗದರ್ಶಿಯಾಗಿವೆ. ಕಷ್ಟಗಳ ಅಗ್ನಿಕುಂಡಲದಲ್ಲಿ ಹಾಯ್ದು ಜಯಶಾಲಿಗಳಾದ ಅವರು ಕೇವಲ ವಿದ್ವಾಂಸರಾಗಿದ್ದರೆ ಕೆಲವೇ ಜನರ ನೆನೆಪಿನಲ್ಲಿ ಉಳಿಯುತ್ತಿದ್ದರು. ಇಂದು ಅವರನ್ನು ಸಮಾಜದ ಎಲ್ಲ ಜನರು ಸ್ಮರಿಸುತ್ತಿರುವುದಕ್ಕೆ ಅವರು ಪ್ರಾಮಾಣಿಕವಾಗಿ, ಪರಿಶುದ್ಧರಾಗಿ ಬದುಕಿದ ರೀತಿಯೇ ಕಾರಣ. ಅವರ ಬದುಕು ಮತ್ತು ಸಾಧನೆ ಇಂದಿನ ಸಮಾಜಕ್ಕೆ ಅದ್ಭುತವಾಗಿ, ತೋರುವುದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಅವರ ಸಾಧನೆ ಜನಸಾಮಾನ್ಯರ ಅಳಿವಿಗೆ ಮೀರಿದ್ದಾಗಿದೆ.

ಸಾಹಿತ್ಯದ ಪ್ರಸಿದ್ಧ ಕವಿಗಳಾದ ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ, ಲಂಕೇಶ, ಕಾರ್ನಾಡ್, ಶಾಂತಿನಾಥ ದೇಸಾಯಿ, ಯು.ಆರ್. ಅನಂತಮೂರ್ತಿ, ಎಸ್.ಎಲ್. ಬೈರಪ್ಪ ಮೊದಲಾದವರ ಕುರಿತು ಅವರ ಬದುಕು-ಬರಹಗಳ ಅಧ್ಯಯನ ನಡೆದಿದೆ. ಆದರೆ ಬೇರೆ ಕ್ಷೇತ್ರದಲ್ಲಿದ್ದೂ ಸಾಹಿತ್ಯಸೇವೆ ಮತ್ತು ಇತರ ಸೇವೆಯನ್ನು ಮಾಡಿದವರ ಬದುಕು-ಸಾಧನೆಗಳ ಬಗ್ಗೆಯೂ ಸಮಾಜಕ್ಕೆ ಅವರ ಕೊಡುಗೆಗಳನ್ನು ಭಿತ್ತರಿಸುವ ಉದ್ದೇಶದಿಂದ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜೀವನ ಮತ್ತು ಸಾಧನೆ ಕುರಿತು ವಿಶ್ಲೇಷಣಾತ್ಮಕ ಅಧ್ಯಯನವನ್ನು ಕೈಗೊಳ್ಳುವುದು ಪ್ರಮುಖ ಉದ್ದೇಶವಾಗಿದೆ.

೧೨ನೇ ಶತಮಾನದಲ್ಲಿ ಬರುವ ಶರಣರ ತತ್ವಗಳನ್ನು ತಮ್ಮ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದು, ಬದುಕಿನಲ್ಲಿ ಮಹತ್ವದ ಸಾಧನೆಯ ಮೈಲುಗಲ್ಲನ್ನು ನಿರ್ಮಿಸಿದ ಶ್ರೇಷ್ಠ ನ್ಯಾಯವಾದಿ ಡಾ. ಶಿವರಾಜ ವಿ. ಪಾಟೀಲರು. ಇವರ ಬದುಕು–ಸಾಧನೆ ನಾಡಿಗೆ, ರಾಷ್ಟ್ರಕ್ಕೆ ಅನಾವರಣಗೊಳಿಸುವ ಉದ್ದೇಶವನ್ನು ಹೊಂದಿದೆ.

ಮಾನವೀಯ ಮೌಲ್ಯಗಳೇ ನಶಿಸಿ ಹೋಗುವ ಇಂದಿನ ದಿನಮಾನಗಳಲ್ಲಿ ಮಾನವೀಯತೆ, ದಕ್ಷತೆ, ಪ್ರಾಮಾಣಿಕತೆಗಳನ್ನೇ ತಮ್ಮ ಉಸಿರನ್ನಾಗಿಸಿಕೊಂಡಿರುವ ನ್ಯಾ. ಶಿವರಾಜ ವಿ. ಪಾಟೀಲರ ಬದುಕು ಯುವ ಪೀಳಿಗೆಗೆ ತುಂಬಾ ಅವಶಕ್ಯವಾಗಿದೆ. ಹೀಗಾಗಿ ಇವರ ಹಳ್ಳಿಯಿಂದ ದಿಲ್ಲಿಯವರೆಗಿನ ಸಾಹಸ ಗಾಥೆಯನ್ನು ಒಂದೆಡೆ ಹಿಡಿದಿಡುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಬದುಕಿನ ಸಮಗ್ರ ದರ್ಶನವನ್ನು ಮತ್ತು ಅವರ ಜೀವನದ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಎಳೆಎಳೆಯಾಗಿ ಪರಿಚಯಿಸುವುದು ಹಾಗೂ ನ್ಯಾಯಾಂಗ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅವರು ಸಾಹಿತ್ಯ ಮತ್ತು ನ್ಯಾಯಾಂಗದ ಕುರಿತು ರಚಿಸಿದ ಇಪ್ಪತ್ತಕ್ಕೂ ಹೆಚ್ಚಿನ ಕೃತಿಗಳು ಮತ್ತು ನೂರಕ್ಕೂ ಹೆಚ್ಚು ಲೇಖನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನ

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜೀವನ ಮತ್ತು ಸಾಧನೆಯ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಪ್ರಧಾನವಾಗಿ ವಿಶ್ಲೇಷಣಾತ್ಮಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ಸತ್ಯಾಸತ್ಯತೆಯ ಕಂಡುಕೊಳ್ಳುವುದು ಮುಖ್ಯವಾಗಿದೆ. ಹಾಗೆಯೇ ಕೆಲವೊಂದು ಅಂತರ್ ಶಿಸ್ತೀಯ ಅಧ್ಯಯನ ವಿಧಾನವನ್ನು ಕೂಡ ಬಳಸಿಕೊಳ್ಳಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು, ಅಭಿಪ್ರಾಯಗಳನ್ನು ಲಿಖಿತ ಮತ್ತು ಮೌಖಿಕ ಸಾಮಗ್ರಿಗಳನ್ನು ಸಾಹಿತ್ಯದಲ್ಲಿ ಚರ್ಚಿಸುವಾಗ ಅವಲೋಕನ ವಿಧಾನವನ್ನನುಸರಿಸಿ ಸಂಶೋಧನೆ ಕೈಗೊಳ್ಳಲಾಗಿದೆ. ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜೀವನ ಮತ್ತು ಸಾಧನೆ ಬಗ್ಗೆ ಅಧ್ಯಯನ ಮಾಡುವುದು ಇಂದಿನ ಪೀಳಿಗೆಗೆ ಅತ್ಯವಶ್ಯಕವಾಗಿದೆ. ಹೀಗಾಗಿ ಎಲ್ಲಾ ಅಂಶಗಳನ್ನು ಅವಲೋಕನ ಮಾಡುವುದು ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗಿರುತ್ತದೆ. ಅಧ್ಯಯನದ ಸಂದರ್ಭದಲ್ಲಿ ಅನೇಕ ವಿಚಾರಗಳ ನೆಲೆಗಳನ್ನು ಗ್ರಹಿಸುವ, ವಿಮರ್ಶಿಸುವ, ಪ್ರಶ್ನಿಸುವ ಹಾಗೂ ತಾರ್ಕಿಕ ಚರ್ಚೆಗೆ ಒಳಪಡಿಸಬೇಕಾದ ಸಂದರ್ಭಗಳು ಬರುತ್ತವೆ. ಇಂತಹ ಸಂದರ್ಭದಲ್ಲಿ ಚರ್ಚಾವಿಧಾನ ಕೂಡ ಸಂಶೋಧನಗೆ ಅನುಕೂಲತೆ ಒದಗಿಸುತ್ತದೆ. ಹೀಗಾಗಿ

ಚರ್ಚಾವಿಧಾನದ ಮೂಲಕ ಅನೇಕ ಅಂಶಗಳನ್ನು ಅರ್ಥೈಸುವ, ವ್ಯಾಖ್ಯಾನಿಸುವ ವಿಧಾನವನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅಧ್ಯಯನದ ಸಮೀಕ್ಷೆ

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಕುರಿತು ನಾಡಿನ ಹಾಗೂ ರಾಷ್ಟ್ರದ ಅನೇಕ ಜನ ಬರಹಗಾರರು ಅವರ ಜೀವನ ಚರಿತ್ರೆ, ಅಭಿನಂದನ ಗ್ರಂಥಗಳು, ಕವನಗಳು, ವಚನಗಳು ಹಾಗೂ ಸ್ವತಃ ನ್ಯಾಯಮೂರ್ತಿಗಳೇ ಬರೆದ ಆತ್ಮಕಥನ ಹಾಗೂ ವಿವಿಧ ಬರಹಗಾರರ ಅನೇಕ ಬಿಡಿ ಲೇಖನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳು ಈ ಕೆಳಗಿನಂತಿವೆ.

ಡಾ. ಚೆನ್ನಬಸವ ಹಿರೇಮಠ ಮತ್ತು ಡಾ. ಅಮರೇಶ ಯತಗಲ್ ಅವರು ಸಂಪಾದಿಸಿದ 'ಶರಣಪಥ' ಎಂಬ ಅಭಿನಂದನಾ ಗ್ರಂಥದಲ್ಲಿ ಕರ್ನಾಟಕ ಚರಿತ್ರೆಯಲ್ಲಿ ನ್ಯಾಯಪದ್ಧತಿ, ಕನ್ನಡ ಕೃತಿಗಳಲ್ಲಿ ನ್ಯಾಯವಿಚಾರ, ನ್ಯಾಯಾಂಗಕ್ಕೆ ಸಂದರ್ಶಿಸಿದ ಸಂಕೀರ್ಣ ಲೇಖನಗಳು, ನ್ಯಾಯಮೂರ್ತಿಗಳ ಪ್ರಮುಖ ಭಾಷಣಗಳು ಹಾಗೂ ಅವರ ಜೀವನ ಚರಿತ್ರೆಯನ್ನು ಬರೆಯಲಾಗಿದ. ಡಾ. ಅಮರೇಶ ಯತಗಲ್ ಅವರ 'ಶಿವಕೃಪೆ' ಎಂಬ ಕೃತಿಯು ತಲಸ್ಪರ್ಶಿಯಾಗಿ ನಡೆಸಿರುವ ಅಧ್ಯಯನವಾಗಿದೆ. ಈ ಹೊತ್ತಿಗೆಯಲ್ಲಿ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜನನ-ಬಾಲ್ಯ, ವಿದ್ಯಾಭ್ಯಾಸ, ವೃತ್ತಿಜೀವನ, ಕೌಟುಂಬಿಕ ಜೀವನ, ಪ್ರಭಾವ-ಪ್ರೇರಣೆ, ಕಾಯಕನಿಷ್ಠೆ, ಕೃತಿಗಳು, ಪ್ರಶಸ್ತಿ ಮತ್ತು ಸನ್ಮಾನಗಳು, ಗಣ್ಯರದೃಷ್ಟಿಯಲ್ಲಿ ಶಿವರಾಜ ಪಾಟೀಲರು ಮುಂತಾದ ಸಂಗತಿಗಳ ಕುರಿತು ವ್ಯಾಪಕವಾಗಿ ಅಧ್ಯಯನ ಮಾಡಿದ ಮೊದಲ ಕೃತಿಯಾಗಿದೆ.

ಡಾ. ಅಮರೇಶ ಯತಗಲ್ ರವರು ಸಂಪಾದಿಸಿದ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಎಂಬತ್ತರ ಸಂಭ್ರಮದ ಕುರಿತು ಸಂಪಾದಿಸಿದ 'ಸಾರ್ಥಕ ಬದುಕು' ಎಂಬ ಗೌರವ ಸಂಪುಟ-೧ ಮತ್ತು ಸಂಪುಟ-೨ ರಲ್ಲಿ ವಚನಗಳು-ವಚನಕಾರರು: ಸಂಶೋಧನಾತ್ಮಕ ದೃಷ್ಠಿಕೋನ ಹಾಗೂ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ವ್ಯಕ್ತಿತ್ವದ ಕುರಿತು ವಿವಿಧ ವಿದ್ವಾಂಸರು ಬರೆದ ಮಹತ್ವದ ಲೇಖನಗಳಿವೆ. 'ವಚನಶಿವ' ಪ್ರೊ. ಚಂದ್ರಯ್ಯನಾಯ್ಡು ಅವರು ೨೦೦೮ ರಲ್ಲಿ ಶ್ರೀ ವೆಂಕಟೇಶ್ವರ ಪ್ರಕಾಶನದಿಂದ ಹೊರತಂದ ಕೃತಿ ಇದಾಗಿದೆ. ಈ ಗ್ರಂಥ ೨೦೦೮ರಲ್ಲಿ ಎರಡನೇ ಮುದ್ರಣವನ್ನು ಕಂಡಿದೆ. ಈ ಸಂಕಲನದಲ್ಲಿ ಇರುವ ವಚನಗಳು ಮಾನ್ಯ ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲರ ಬದುಕಿನ ಮೌಲ್ಯಗಳನ್ನು, ಘನವ್ಯಕ್ತಿತ್ವದ ಚಿತ್ರಣವನ್ನು ಸೆರೆಹಿಡಿದಿದೆ. ಸತ್ವಯುತ ರಚನೆಗೆ ಪ್ರತಿಬಿಂಬದಂತಿರುವ ಇಲ್ಲಿಯ ವಚನಗಳಲ್ಲಿ ನಿರರ್ಗಳತೆ, ವಿಷಯದ ಹರವು, ವಸ್ತುನಿಷ್ಠ ಚಿತ್ರಣಗಳು ಸಾಹಿತ್ಯ ಕ್ಷೇತ್ರದಲ್ಲಿ ವಚನ ಪ್ರಕಾರಕ್ಕೊಂದು ಅಗ್ರಸ್ಥಾನವಿದೆ ಎಂಬುದನ್ನು ಸಾಬೀತುಮಾಡಿದೆ.

Devine grace: ಇದು 'ಶಿವಕೃಪೆ' ಎಂಬ ಹೆಸರಿನಲ್ಲಿ ಡಾ.ಅಮರೇಶ ಯತಗಲ್ ರವರಿಂದ ರಚನೆಯಾದ ಕೃತಿಯ ಅನುವಾದವಾಗಿದೆ. ಇದು ಮಾನ್ಯ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರವರ ಜೀವನ ಚರಿತ್ರೆಯಾಗಿದ್ದು, ಇದನ್ನು ಪ್ರೊ. ಎನ್.ನಂಜುಂಡಶಾಸ್ತ್ರಿ, ಅವರು 'Divine Grace' ಎನ್ನುವ ಹೆಸರಿನಿಂದ ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದಾರೆ. ೨೦೦೯ ರಲ್ಲಿ ಧಾರವಾಡದ ನ್ಯಾಯವಾದಿಗಳಾದ ಬಿ.ಎಸ್.ಸಂಗಟಿಯವರು ಇದರ ಪ್ರಕಾಶಕರಾಗಿದ್ದಾರೆ. ಇದಲ್ಲದೆ, ರಾಷ್ಟ್ರ, ರಾಜ್ಯ, ಪ್ರಾದೇಶಿಕ, ಸ್ಥಳೀಯ ಮಟ್ಟದ ವಿವಿಧ ಸಂಚಿಕೆ ಹಾಗೂ ಪತ್ರಿಕೆಗಳಲ್ಲಿ ಸಂದರ್ಶನ, ಪರಿಚಯಾತ್ಮಕ ಲೇಖನಗಳು ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಬಗೆಗೆ ಚರ್ಚೆ ನಡೆಸಿದ್ದು, ಅಲ್ಲಲ್ಲಿ ಹೊಸ ಹೊಸ ಆಲೋಚನೆಗಳು ಮಂಡಿತವಾಗಿವೆ.

ಅಧ್ಯಯನದ ಸ್ವರೂಪ

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರ ಜೀವನ ಸಾಧನೆ ಎಂಬ ಅಧ್ಯಯನದಲ್ಲಿ ಹಲವು ವಿಧಾನಗಳನ್ನು ಅನುಸರಿಸಿ ಪ್ರತ್ಯೇಕಿಸಲಾದ ವಸ್ತುವಿಷಯಗಳನ್ನು ವ್ಯವಸ್ಥಿತವಾದ ವಿಶ್ಲೇಷಣೆ ಮತ್ತು ನಿರೂಪಣೆಯ ದೃಷ್ಟಿಯಿಂದ ಪ್ರಸ್ತುತ ಮಹಾಪ್ರಬಂಧದ ಸ್ವರೂಪವನ್ನು ಐದು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಆರಂಭದ 'ಪ್ರಸ್ತಾವನೆ'ಯಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸಮೀಕ್ಷೆ ಹಾಗೂ ಸ್ವರೂಪವನ್ನು ವಿವರಿಸಲಾಗಿದೆ.

ಒಂದನೇ ಅಧ್ಯಾಯ: **'ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜೀವನ ಮತ್ತು ಸಾಧನೆಗಳು'** ಆಗಿದ್ದು, ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜನನ–ಬಾಲ್ಯ–ವಿದ್ಯಾಭ್ಯಾಸ, ವಿದ್ಯಾರ್ಥಿ ಜೀವನದ ವೈಶಿಷ್ಟ್ಯ ಕೌಟುಂಬಿಕ ಜೀವನ, ಆಸಕ್ತಿ–ಅಭಿರುಚಿಗಳ ಬಗ್ಗೆ ವಿವರಿಸಲಾಗಿದೆ. ನಂತರ ರಾಯಚೂರು, ಕಲಬುರಗಿ ಮತ್ತು ಬೆಂಗಳೂರುನಲ್ಲಿ ಕಳೆದ ವೃತ್ತಿ ಜೀವನದ ಸಮಗ್ರ ವಿವರಗಳನ್ನು ವಿವೇಚಿಸಲಾಗಿದೆ. ಅಲ್ಲದೆ ಜೀವನ ಚರಿತ್ರೆಯಲ್ಲಿ ಸಾಧ್ಯವಾದಷ್ಟು ಸಮಗ್ರತೆಯನ್ನು ತರುವ ಹಾಗೂ ಸಂಪೂರ್ಣ ವ್ಯಕ್ತಿ ಚಿತ್ರವನ್ನು ನೀಡುವ ಉದ್ದೇಶದಿಂದ ಉಪಲಬ್ಧ ಮಾಹಿತಿಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆ.

ಎರಡನೇ ಅಧ್ಯಾಯ: **'ಕನ್ನಡ ಸಾಹಿತ್ಯಕ್ಕೆ ಶಿವರಾಜ ವಿ. ಪಾಟೀಲರ ಕೊಡುಗೆಗಳು'** ಆಗಿದ್ದು, ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಸಾಹಿತ್ಯ ಮತ್ತು ನ್ಯಾಯಾಂಗ ಕ್ಷೇತ್ರದಲ್ಲಿ ರಚಿಸಿದ ಕೃತಿಗಳು, ಲೇಖನಗಳು, ವಿವಿಧ ವಿಶ್ವವಿದ್ಯಾಲಯದಲ್ಲಿ ಮಾಡಿದ ಭಾಷಣಗಳು–ಉಪನ್ಯಾಸಗಳು ಹಾಗೂ ಕನ್ನಡ ಪರ ಚಟುವಟಿಕೆಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಲಾಗಿದೆ.

ಮೂರನೇ ಅಧ್ಯಾಯ: **'ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರವರ ಪ್ರಮುಖ ಸಂಸ್ಥೆಗಳಲ್ಲಿ ಸೇವೆ'**ಯಲ್ಲಿ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಶೈಕ್ಷಣಿಕ ಸಾಧನೆಯನ್ನು ಗುರುತಿಸುವುದು ಮತ್ತು ಹಿಂದಿ ಪ್ರಚಾರ ಸಭಾ, ವಿಜ್ಞಾನೇಶ್ವರ ಅಧ್ಯಯನ ಪೀಠ, ಜೆ.ಎಸ್.ಎಸ್. ಮಹಾವಿದ್ಯಾಪೀಠ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ಎಸ್. ನಿಜಲಿಂಗಪ್ಪ ನ್ಯಾಷನಲ್ ಪೌಂಡೇಶನ್ ಹೀಗೆಯೇ ಪ್ರಮುಖ ಸಂಸ್ಥೆಗಳಿಗೆ ನೀಡಿರುವ ಸಲಹೆ ಹಾಗೂ ಸೇವೆಯನ್ನು ಸವಿಸ್ತಾರವಾಗಿ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯ: **'ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ರವರ ಸಮಾಜಮುಖಿ ಕಾರ್ಯಗಳು'** ಆಗಿದ್ದು, ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರು ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಪರಿಚಯಿಸುವ ಕಾರ್ಯಕೈಗೊಳ್ಳಲಾಗಿದೆ. ಬಾಲ್ಯವಿವಾಹ ವರದಿ, ೨ಜಿಸ್ಪೆಕ್ಟ್ರಂ ಹಗರಣ, ಮಧ್ಯಸ್ಥಿಕೆ ವ್ಯಾಜ್ಯಗಳ ತೀರ್ಮಾನ ವ್ಯವಸ್ಥೆ, ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಹೆಸರಿನ ಪ್ರತಿಷ್ಠಾನಗಳು ಮತ್ತು ಕನ್ನಡಪರ ಕಾರ್ಯಗಳನ್ನು ಅಮೂಲಾಗ್ರವಾಗಿ ಚರ್ಚಿಸಲಾಗಿದೆ.

ಐದನೇ ಅಧ್ಯಾಯ: **'ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರ ನ್ಯಾಯಾಂಗ ಸುಧಾರಣೆಗಳು'** ಆಗಿದ್ದು, ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರು ನ್ಯಾಯಾಂಗ ಕ್ಷೇತ್ರದಲ್ಲಿ ಮಾಡಿದ ಸುಧಾರಣೆಗಳು ಮತ್ತು ಅವರು ನ್ಯಾಯಾಂಗ ಕ್ಷೇತ್ರದಲ್ಲಿ ನೀಡಿದ ತೀರ್ಪುಗಳನ್ನು ವಿಶ್ಲೇಷಣೆ ಮಾಡಿರುವುದಲ್ಲದೆ, ನ್ಯಾಯಾಂಗೀಯ ಆಡಳಿತಾತ್ಮಕ ಸುಧಾರಣೆಗಳನ್ನು ನಿಷ್ಕರ್ಷಿಸಲಾಗಿದೆ.

'ಸಮಾರೋಪ'ದಲ್ಲಿ, ಇಡೀ ಪ್ರಬಂಧದಲ್ಲಿ ಕಂಡುಕೊಂಡ ಅಧ್ಯಯನದ ಸಾರಂಶ ಮತ್ತು ಫಲಿತಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ. ನಂತರ ಅಧ್ಯಯನದ ಹೊಸ ಸಾಧ್ಯತೆಗಳ ಬಗ್ಗೆ ಚರ್ಚಿಸಲಾಗಿದೆ. ಅನುಬಂಧದಲ್ಲಿ ನ್ಯಾಯಮೂರ್ತಿಗಳ ಜೀವನದಲ್ಲಿ ಪ್ರಮುಖ ಪಾತ್ರವಹಿಸಿದ ಸ್ಥಳಗಳ ವಿವರಗಳ ನಕ್ಷೆಯನ್ನು ಕೊಡಲಾಗಿದೆ. ನಂತರ ನ್ಯಾಯಮೂರ್ತಿಗಳ ಕುಟುಂಬದ ವಂಶವೃಕ್ಷವನ್ನು ನೀಡಲಾಗಿದೆ. ತದನಂತರದಲ್ಲಿ ಅವರನ್ನು ಅರಸಿ ಬಂದ ಗೌರವ–ಪ್ರಶಸ್ತಿ–ಸನ್ಮಾನಗಳನ್ನು ಕೊಡಲಾಗಿದೆ. ಕೊನೆಯಲ್ಲಿ ವಕ್ತೃಗಳ ವಿವರ, ಪರಾಮರ್ಶನ ಗ್ರಂಥಗಳು ಹಾಗೂ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಕುರಿತಾದ ಪ್ರಮುಖ ಛಾಯಾಚಿತ್ರಗಳನ್ನು ನೀಡಲಾಗಿದೆ.